ಸಮಾಜವೇ ಮೌಲ್ಯಗಳ ನಾಶದತ್ತ ಸಾಗಿರುವಾಗ, ಹೊಸತಲೆಮಾರಿನ ಪಾಲಿಗೆ 'ಇದು ಸಹಜ' ಎಂಬಂತಾಗಿದೆ ಎಂಬುದು ಅವರ ನಿಲುವು.

ಹೌದು, ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ 'ಪ್ರಾಕ್ಟಿಕಲೀ ನಾಟ್ ಪಾಸಿಬಲ್ ಯಾರ್' ಎಂದು ಭುಜ ಹಾರಿಸುವ ಧೋರಣೆಯು ಢಾಳಾಗಿ ಕಾಣಿಸುತ್ತಿರುವುದಂತೂ ಸುಳ್ಳಲ್ಲ.

## ಸಂದಿಗ್ಧಗಳಿಂದ ವ್ಯಕ್ತಿತ್ವ ಒರೆಗೆ

ರವಿಕೃಷ್ಣಾ ರೆಡ್ಡಿ ಮತ್ತು ಡಾ. ಸಂಜೀವ ಕುಲಕರ್ಣಿ ಇಬ್ಬರೂ ಗುರುತಿಸುವ ಒಂದು ಸಂಗತಿ, ತಮ್ಮ ವ್ಯಕ್ತಿತ್ವವನ್ನು ಉದಾತ್ತೀಕರಿಸಬೇಕು ಎಂಬ ಆಶಯವೊಂದು ಈಗಿನ ತಲೆಮಾರಿನ ಜನರ ಅಂತರಂಗದಲ್ಲಿ ಕಾಣಿಸದಿರುವುದು ಅಥವಾ ಕಡಿಮೆಯಾಗಿರುವುದು. ತಂದೆ ತಾಯಿಯ ಜೊತೆಗೆ ಅಥವಾ ಹಿರಿಯ ತಲೆಮಾರಿನ ಜೊತೆಗೆ ನಿಲ್ಲುವುದು, ಅವರನ್ನು ಸಹಿಸಿಕೊಳ್ಳುವುದು, ಇವೆಲ್ಲವೂ ನಮ್ಮ ವ್ಯಕ್ತಿತ್ವನ್ನು ಶ್ರೀಮಂತಗೊಳಿಸಿಕೊಳ್ಳಲು ಇರುವ ಅವಕಾಶಗಳೇ ಆಗಿವೆ. ಹಾಗೆಂದು ಇಂಥ ವಿಷಯಗಳನ್ನು ಗಮನಿಸಿ ನಿರ್ಣಯಾತ್ಮಕವಾಗಿ ಯೋಚನೆ ಮಾಡುವುದು ಸಾಧ್ಯವಾಗುವುದಿಲ್ಲ.

ಪ್ರಸ್ತುತ ಜನರು ದುಡಿಮೆ ಮತ್ತು ಹಣಗಳಿಕೆಯ ಏಕ ಉದ್ದೇಶದಿಂದ ಓಟದಲ್ಲಿ ನಿರತರಾಗಿದ್ದಾರೆ ಎಂದು ಅನಿಸುತ್ತದೆ. ಸಮಾಜವು ಅರ್ಥಕೇಂದ್ರಿತವಾಗಿ ಯೋಚನೆ ಮಾಡುವುದಕ್ಕೆ ಆರಂಭಿಸಿ ನೂರಾರು ವರ್ಷಗಳೇ ಆಗಿವೆ. ಕಾಲವು ಸಾಗುತ್ತಿದ್ದಂತೆಯೇ ಅರ್ಥಕೇಂದ್ರಿತ ವ್ಯವಸ್ಥೆಗೆ ಹೆಚ್ಚು ಒತ್ತುಕೊಡುವ ವಿಚಾರಗಳು ಇನ್ನಷ್ಟು ಬಲ ಪಡೆದುಕೊಳ್ಳುತ್ತಲೇ ಇದೆ. ಅಂತಹ ವ್ಯವಸ್ಥೆಯಡಿ ಅನೇಕ ಮೌಲ್ಯಗಳು ನಜ್ಜುಗುಜ್ಜಾಗುತ್ತಿರುವುದನ್ನು ಹಿರಿಯರೂ ಗಮನಿಸಿದ್ದಾರೆ, ಈಗಿನ ತಲೆಮಾರು ಅಂದರೆ ಮಧ್ಯವಯಸ್ಸಿನವರೂ ಗಮನಿಸುತ್ತಿದ್ದಾರೆ. ಎಷ್ಟೋ ಸಂದರ್ಭದಲ್ಲಿ ತಮ್ಮ ಈ ನಿರ್ಧಾರಗಳು ಸರಿಯಿಲ್ಲ ಎಂದು ಅನಿಸಿದರೂ, ಅಂತಹ ನಿರ್ಧಾರವನ್ನೇ ಅವಲಂಬಿಸಿ ಸಾಗಬೇಕಾದ ಅನಿವಾರ್ಯತೆಗಳು ಎದುರಾಗುತ್ತಿವೆ. ಸೀಮಿತ ಸಂಪನ್ಮೂಲ ಇರುವಾಗ, ಆದ್ಯತೆಗಳು ಮನೆಯ ಮಕ್ಕಳ ಕಡೆಗಿರುತ್ತವೆ. ಹಿರಿಯರಿಗೆ ಸಲ್ಲಬೇಕಾದ ಆದ್ಯತೆ ಎರಡನೇ ಸ್ಥಾನಕ್ಕಿಳಿದುಬಿಡುತ್ತದೆ. ಹಿರಿಯರು ಎಂದೋ ಮಾಡಿದ ತಪ್ಪು ನಿರ್ಧಾರಗಳು ಮಕ್ಕಳ ಯೋಚನೆಯನ್ನು ಈ ದಿಕ್ಕಿನತ್ತ ತಳ್ಳಿಬಿಡುತ್ತವೆ.

'ಕಾಲ ಇರುವುದೇ ಹೀಗೆ... ಅದಕ್ಕಾಗಿ ನಮ್ಮ ವರ್ತನೆಯೂ ಹೀಗೆ' ಎಂದು ಕೈ ಚೆಲ್ಲಿ

